25th July 2008

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (229) 99
ಮಾನ್ಯ ಸದಸ್ಯರ ಹೆಸರು : ಶ್ರೀ ಜಯಚಂದ್ರ ಟಿ.ಬಿ.
ಉತ್ತರಿಸುವ ಸಚಿವರು : (ಶ್ರೀ ಹೆಚ್. ಹಾಲಪ್ಪ)
ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ವಿವಿಧ ಯೋಜನೆಯಡಿ (ಎ.ಪಿ.ಎಲ್. ಬಿ.ಪಿ.ಎಲ್. ಅನ್ನಪೂರ್ಣ. ಅಂತ್ಯೋದಯ ಹಾಗೂ ಇತರೆ) ನೀಡಿರುವ ಪಡಿತರ ಕಾರ್ಡುಗಳ ಸಂಖ್ಯೆ ಎಷ್ಟು ?
ಆ ಪೈಕಿ ತಾತ್ಕಾಲಿಕವಾಗಿ ನೀಡಿರುವ ಪಡಿತರ ಚೀಟಿ ಹಾಗೂ ಮೂಲ ಚೀಟಿಗಳ ಸಂಖ್ಯೆ ಎಷ್ಟು/</td><td>ರಾಜ್ಯದಲ್ಲಿ ಕೆಳಕಂಡಂತೆ ವರ್ಗವಾರು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.
<table>
<tr><th>ಪಡಿತರ ಚೀಟಿಗಳು</th><th>ವಿತರಿಸಲಾದ ಸಂಖ್ಯೆ</th></tr>
<tr><td>ಎಎವೈ</td><td>11.99.700</td></tr>
<tr><td>ಅಕ್ಷಯ (ಬಿಪಿಎಲ್)</td><td>60.16.743</td></tr>
<tr><td>ಎಪಿಎಲ್</td><td>51.28.519</td></tr>
<tr><td>ಒಟ್ಟು</td><td>1.23:44.962</td></tr>
</table>
ಈಗಾಗಲೇ ಮೇಲ್ಕಂಡ ಎಲ್ಲಾ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ. ಈ ತಾತ್ಕಾಲಿಕ ಪಡಿತರ ಕೂಪನ್‌ಗಳಿಗೆ ಖಾಯಂ ಗಣಕೀಕೃತ ಪಡಿತರ ಚೀಟಿಗಳನ್ನು ವಿತರಿಸುವ ಕಾರ್ಯ ಪ್ರಗತಿಯಲ್ಲಿದೆ.</td></tr>
<tr><td>ಆ)</td><td>ಈಗಾಗಲೇ ಗ್ರಾಮಾಂತರ ಪ್ರದೇಶದಲ್ಲಿ ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗಿರುವ ತಾರತಮ್ಯದಿಂದ ವ್ಯತ್ಯಾಸವಾಗಿ ಬಿ.ಪಿ.ಎಲ್. ಕಾರ್ಡುಗಳು ಕಡು ಬಡವರಿಗೆ ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?</td><td>ಹೌದು.</td></tr>
<tr><td>ಇ)</td><td>ಹಾಗಿದ್ದಲ್ಲಿ. ಈ ವ್ಯತ್ಯಾಸವನ್ನು ಸರಿಪಡಿಸಲು ಸರ್ಕಾರದ ಕ್ರಮವೇನು?</td><td>ಫಲಾನುಭವಿಗಳನ್ನು ಗುರುತಿಸುವಲ್ಲಿ ಆಗಿರುವ ವ್ಯತ್ಯಾಸದ ಕಾರಣ ಅಹವಾಲುಗಳನ್ನು ಸ್ವೀಕರಿಸಲಾಯಿತು. ಹೊಸ ಪಡಿತರ ಚೀಟಿ ಕೋರಿ ಸ್ವೀಕರಿಸಲಾದ ಅಹವಾಲುಗಳನ್ನು ಪರಿಶೀಲಿಸಿ. ಪರಿಶೀಲನೆಯ ನಂತರ ಅರ್ಹ 4.04.276 ಕುಟುಂಬಗಳಿಗೆ ತಾತ್ಕಾಲಿಕ ಬಿಪಿಎಲ್ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದೆ. ಬಾಕಿ 7.27.813 ಅರ್ಹ ಕುಟುಂಬಗಳಿಗೆ ಶೀಘ್ರವಾಗಿ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗುವುದು.</td></tr>
</table>